**ಸಾಕ್ಷಿಯನ್ನು ದಿಃ 10.03.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ನಮೂದಿಸಿರುವ ಎಲ್ಲಾ ವಿಷಯಗಳು ಸರಿಯಾಗಿ ಮತ್ತು ಸತ್ಯವಾಗಿರುತ್ತವೆ. ಅದಕ್ಕೆ ನನ್ನ ಸಹಿ ಇರುತ್ತದೆ.

ಅರ್ಜಿದಾರರಿಗೆ ಸಂಬಂಧಿಸಿದ ಕೇಸ್ ಶೀಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ. 13 ಎಂದು,

ಒಂದು ಎಕ್ಸ್ ರೇ ಫಿಲಂ ಹಾಜರುಪಡಿಸಿದ್ದು ನಿಪಿ. 14 ಎಂದು,

ಒಂದು ನ್ಯೂರೋ ಬಿಹೇವಿಯರಲ್ ಅಸ್ಸೆಸ್ಮೆಂಟ್ ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ. 15 ಎಂದು,

ಹೊರರೋಗಿ ದಾಖಲೆಯನ್ನು ಹಾಜರು ಪಡಿಸಿದ್ದು ನಿಪಿ.16 ಎಂದು ಗುರುತಿಸಲಾಯಿತು.

**ಪಾಟೀ ಸವಾಲು – 2 ನೇ ಎದುರುದಾರರ ಪರ ವಕೀಲರಿಂದ**

ಅರ್ಜಿದಾರರು ಬೇರೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಬಂದಿದ್ದರು ಎಂದರೆ ಸರಿ. ದಿಃ 11.02.2024 ರಂದೇ ಪ್ರಥಮ ಚಿಕಿತ್ಸೆ ಪಡೆದು ಬಂದಿದ್ದಾರೆ. ನಮ್ಮಲ್ಲಿ ಹಿಂದಿನ ಆಸ್ಪತ್ರೆಯ ದಾಖಲೆ ಇಲ್ಲ. ಮೊದಲಿಗೆ ಜನರಲ್ ಸರ್ಜನ್ ನೋಡಿದ್ದಾರೆ. ನಾನು ಅರ್ಜಿದಾರರನ್ನು 12 ನೇ ತಾರೀಖಿನಂದು ಪರೀಕ್ಷಿಸಿದ್ದೇನೆ. ಅರ್ಜಿದಾರರಿಗೆ ಆಸ್ಪತ್ರೆಗೆ ಬರುವಾಗ ಪ್ರಜ್ಞೆ ಇತ್ತು. ನಾನು ಪರೀಕ್ಷೆ ಮಾಡುವಾಗ ಅರ್ಜಿದಾರರು ಸರಿಯಾಗಿ ಮಾತನಾಡುತ್ತಿದ್ದರು. ತಲೆಗೆ ಸಂಬಂಧಿಸಿದಂತೆ ಅರ್ಜಿದಾರರಿಗೆ ಚಿಕಿತ್ಸೆ ನೀಡಿದ್ದೇನೆ. ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆ ಆಗಿಲ್ಲ. ಅರ್ಜಿದಾರರ ಸಿ.ಟಿ. ಸ್ಕ್ಯಾನ್ ಮಾಡಿದ್ದೇವೆ ವರದಿ ಕೇಸ್ ಶೀಟ್ ನಲ್ಲಿ ಇದೆ. ಆಕೆಗೆ ಆ ವರದಿಯ ಪ್ರಕಾರ ಮೈಲ್ಡ್ ಇಂಜ್ಯೂರಿ ಎಂದು ಇದೆ ಎಂದರೆ ಸರಿ. ಅರ್ಜಿದಾರರನ್ನು ದಿಃ 15.02.2024 ರಂದು ಬಿಡುಗಡೆ ಗೊಳಿಸಿದ್ದೇವೆ. ಅರ್ಜಿದಾರರು ತಕ್ಕಮಟ್ಟಿಗೆ ಗುಣಮುಖರಾಗಿದ್ದಾರೆ. ದಿಃ 15.02.2024 ರಿಂದ ದಿಃ 18.12.2025 ರ

ನಡುವೆ ಅರ್ಜಿದಾರರು ನನ್ನ ಬಳಿ ಚಿಕಿತ್ಸೆಗೆ ಬರುವ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ಕೊನೆಯ ಬಾರಿ ನ್ಯೂನತೆ ನಿರ್ಧರಿಸಿಕೊಳ್ಳಲು ನನ್ನ ಬಳಿ ಬಂದಿದ್ದಾರೆ ಎಂದರೆ ಸರಿ.

2. ಹೃತ್ವಿಕ್ ಎಸ್ ಕಶ್ಯಪ್ ಎಂಬ ವೈಧ್ಯರು ಸೈಕೋಲಾಜಿಕಲ್ ಅಸ್ಸೆಸ್ಮೆಂಟ್ ವರದಿಯನ್ನು ನೀಡಿರುತ್ತಾರೆ. ಅವರ ಬಳಿ ಹೋಗಲು ನಾನು ಬರವಣಿಗೆಯಲ್ಲಿ ಬರೆದು ಕೊಟ್ಟಿಲ್ಲ. ಮೈಲ್ಡ್ ಅಟಾಕ್ಸಿಯಾ ಬಗ್ಗೆ ನಾನೇ ಪರೀಕ್ಷಿಸಿದ್ದೇನೆ. ಮೈಲ್ಡ್ ಅಟಾಕ್ಸಿಯಾ ದಿನದಿಂದ ದಿನಕ್ಕೆ ಕಡಿಮೆ ಆಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ನಿಪಿ. 15 ವರದಿಯ ಬಗ್ಗೆ ನಾನು ಸಾಕ್ಷಿ ನುಡಿಯಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಹಾಯ ಮಾಡಲು ಉತ್ಪ್ರೇಕ್ಷೆಯಿಂದ ನ್ಯೂನತೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ದೈಹಿಕ ವ್ಯಾಯಾಮ ಇತ್ಯಾದಿ ಮಾಡಿದರೆ ಸದರಿ ನ್ಯೂನತೆಯ ಪ್ರಮಾಣ ಕಡಿಮೆ ಆಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಮೈಲ್ಡ್ ಅಟಾಕ್ಸಿಯಾ ವಂಶಪಾರಂಪಾರ್ಯವಾಗಿ ಬರುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಅರ್ಜಿದಾರರ ಉದ್ಯೋಗದ ಬಗ್ಗೆ ಮಾಹಿತಿ ನೀಡಿದ್ದಾರೆ. ಅಪಘಾತದ ಮೊದಲಿನ ಕೆಲಸ ಕಾರ್ಯಗಳನ್ನು ಈಗಲೂ ಮಾಡಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ನಾನು ಹೇಳುವಂತೆ ಅರ್ಜಿದಾರರಿಗೆ ಯಾವುದೇ ತೀವ್ರ ಸ್ವರೂಪದ ಗಾಯಗಳಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.